ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳಬಯಸುತ್ತೇನೆ

25 ಕೆ ಹೆಚ್ ಎಸ್ ಡಿ ಪಿ ಕಡೆಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂ ಗಳ ಕಾಮಗಾರಿ ನಡೆದಿದ್ದರೂ ಸೌಕರ್ಯ ಇಲ್ಲದಿರುವುದರ ಬಗ್ಗೆ

ಶ್ರೀ ಎನ್ ಯೋಗೀಶ್‌ಭಟ್ (ಮಂಗಳೂರು) ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಸಂಗತಿಯೆಂದರೆ ಕೆ ಹೆಚ್ ಎಸ್ ಡಿ ಪಿ ವತಿಯಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಸುಮಾರು 5 ಕೋಟಿ ರೂಪಾಯಿಗಳ ಕಾಮಗಾರಿ ನಡೆದಿದೆ ಅಲ್ಲಿ ಈ ಹಿಂದೆ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿತ್ತು ಈಗ ವಾರ್ಡ್‌ಗಳಲ್ಲಿ ಕುಡಿಯುವ ನೀರು ಬರುತ್ತಿಲ್ಲ ಇನ್ನು ಎರಡನೆಯದಾಗಿ, ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿರುವಂಥ ಉತ್ತರದಲ್ಲಿ ಎಲ್ಲವೂ ಸಂಪೂರ್ಣವಾಗಿದೆ ಮತ್ತು ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ ಅನೇಕ ಮಾಹಿತಿಗಳಿವೆ ಅಲ್ಲಿರುವಂಥ ಆಪರೇಶನ್ ಥಿಯೇಟರ್‌ಗಳಲ್ಲಿ ಡಾಕ್ಟರ್‌ಗಳು ಎಲ್ಲಾದರೂ ಗೋಡೆಯನ್ನು ಮುಟ್ಟಿದರೆ ಶಾಕ್ ಹೊಡೆಯುತ್ತಿದೆ ಮೊನ್ನೆತನಕ ಶಾಕ್ ಹೊಡೆಯುತ್ತಿತ್ತು ಈಗ ದುರಸ್ತಿಯಾಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ ಇನ್ನು ಎರಡನೆಯದಾಗಿ ಆಪರೇಶನ್ ಥಿಯೇಟರ್‌ನಲ್ಲಿರುವ ಸ್ವಿಚ್‌ಗಳಲ್ಲಿ ಒಂದನ್ನು ಆನ್ ಮಾಡಿದರೆ ಕರೆಂಟ್ ಬರುತ್ತದೆ, ಎರಡನೆಯ ಸ್ವಿಚ್‌ನ್ನು ಆನ್ ಮಾಡಿದರೆ ಟ್ರಿಪ್ ಆಗಿ ಬಿಡುತ್ತದೆ ಇಂಥ ದುಸ್ಥಿತಿ ಅಲ್ಲಿದೆ ಇನ್ನು ಮೂರನೆಯದಾಗಿ, ಅಲ್ಲಿ ಶವಾಗಾರ ಇದೆ ಆ ಶವಾಗಾರದಲ್ಲಿ ಹೆಣವನ್ನು ನೋಡುವುದಕ್ಕೆ ಹೋದವರು ಅಲ್ಲಿ ನೇತಾಡುತ್ತಿರುವಂಥ ಲೈನ್ ವೈರ್‌ನ್ನು ಏನಾದರೂ ಗೊತ್ತಿಲ್ಲದೇ ಮುಟ್ಟಿಬಿಟ್ಟರೆ ಅವರೇ ಹೆಣವಾಗುವಂಥ ದುಸ್ಥಿತಿ ಅಲ್ಲಿದೆ ಒಂದು ಪ್ಲಾಸ್ಟಿಕ್ ಕವರ್ ಹಾಕಿ ತರಬೇಕೆನ್ನುವ ಕನಿಷ್ಟವಾದಂಥ ಕಾಮನ್‌ಸೆನ್ಸ್‌ನಿಂದ ಕೆಲಸ ಮಾಡಿಲ್ಲ ಇನ್ನು ಅಲ್ಲಿ ಹಿಂದೆ ಸರಿ ಇದ್ದಂಥ ಒಳಚರಂಡಿ ವ್ಯವಸ್ಥೆ ಈಗ ಎಲ್ಲವೂ ಬ್ಲಾಕ್ ಆಗಿ ಮಣ್ಣು ತುಂಬಿಕೊಂಡಿದೆ ಲಿಫ್ಟ್ ಕೂಡ ಅರ್ಧದಲ್ಲಿಯೇ ನಿಂತಿದೆ ಆದಕಾರಣ ಇಂಥ ಅನೇಕ ಸಮಸ್ಯೆಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಬಯಸುತ್ತೇನೆ ಅಲ್ಲಿಯ ಡಿ ಹೆಚ್ ಓ ವಿವರವಾಗಿ 19 ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದಿದದ್ದಾರೆ ಆದರೆ ದುರಾದೃಷ್ಟವಶಾತ್ ಬೆಂಗಳೂರಿನಲ್ಲಿರುವಂಥ ಅಧಿಕಾರಿಗಳು ಅವರಿಗೆ ಏನು ಹೇಳುತ್ತಿದ್ದಾರೆಂದರೆ, ನೀವೂ ಕೂಡ ಸರ್ಕಾರಿ ಅಧಿಕಾರಿಗಳೇ ಆಗಿದ್ದೀರಿ, ಆದಕಾರಣ ಎಲ್ಲವೂ ಸರಿಯಾಗಿದೆ, ತೃಪ್ತಿಕರವಾಗಿದೆ ಎಂದು ಹೇಳುವಂಥ ಉತ್ತರ ಕೊಡಿ ಎಂದು ಒಂದು ರೀತಿಯಲ್ಲಿ ಅವರಿಗೆ ಒತ್ತಾಯ ಮಾಡುತ್ತಿದ್ದಾರೆ ಆಗಿರುವಂಥಾದ್ದರ ಬಗ್ಗೆ ತಾವು ವಸ್ತುನಿಷ್ಠವಾಗಿ ಅಧ್ಯಯನವನ್ನು ನಡೆಸಬೇಕು ಮತ್ತು ಆಗಿರುವಂಥ ದೋಷಗಳ ಬಗ್ಗೆ ತನಿಖೆ ನಡೆಸಬೇಕು ಮಾನ್ಯ ಮುಖ್ಯಮಂತ್ರಿಗಳ ಕಡೆಯಿಂದ ಕೊಟ್ಟಿರುವಂಥ, ನಿಯಮ 351ರಲ್ಲಿ ಕೊಟ್ಟಿರುವಂಥ ಉತ್ತರದಲ್ಲಿ ತಪ್ಪು ಉತ್ತರವನ್ನು ಕೊಟ್ಟಿದ್ದಾರೆ ಎಲ್ಲಾ ಸಂಪೂರ್ಣ ತೃಪ್ತಿಕರವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ **ಲಿಫ್ಟ್ ಅರ್ಧದಲ್ಲಿದೆ, ಕೆಲಸವಾಗಿಲ್ಲ ಇದರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು**

ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ ಆಗಿರುವಂಥ ಕಾಮಗಾರಿಗಳಲ್ಲಿ ಇರುವಂಥ ದೋಷಗಳನ್ನೂ ಕೂಡ ಸರಿಪಡಿಸಬೇಕು ಎನ್ನುವ ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ನಾನು ಮಾಡಲಿಚ್ಛಿಸುತ್ತೇನೆ ಕೊನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇಲ್ಲ ಎನ್ನುವುದನ್ನು ಕಳೆದ ಎರಡು ದಿವಸಗಳ ಹಿಂದೆ ಪ್ರಸ್ತಾಪ ಮಾಡಿದ್ದು, ಇವತ್ತಿಗೂ ಆ ಸಮಸ್ಯೆ ಪರಿಹಾರವಾಗಿಲ್ಲ, ಇವತ್ತಿಗೂ ಅದು ಕಂಟಿನ್ಯೂ ಆಗುತ್ತಿದೆ ಈ ಬಗ್ಗೆ ಸರ್ಕಾರ ಆದೇಶ ಕೊಟ್ಟಿದೆ ಎಂದು ಹೇಳುತ್ತಿದ್ದಾರೆ, ಆದರೆ ಇನ್ನೂ ಪ್ರಾರಂಭವಾಗಿಲ್ಲ ಹೀಗಾದರೆ, ಸರ್ಕಾರೀ ಆದೇಶಕ್ಕೆ ಏನು ಬೆಲೆ ಎನ್ನುವುದನ್ನೂ ಸಹ ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ ತಕ್ಷಣ ಅದನ್ನು ಸರಿಪಡಿಸಬೇಕು ಎಂದು ವಿನಂತಿ ಮಾಡುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ (ಕೃಷಿ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಯೋಗೀಶ್ ಭಟ್‌ರವರು ಹೇಳಿದ ಹಾಗೆ ದಕ್ಷಿಣ ಕನ್ನಡದ ಆಸ್ಪತ್ರೆಗಳಲ್ಲಿ ಕೆಲಸ ಇನ್ನೂ ಮುಗಿದಿಲ್ಲ ಆದರೆ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ ಯಾರಾದರೂ ಅಧಿಕಾರಿ ಆ ರೀತಿ ತಪ್ಪು ಮಾಹಿತಿ ಕೊಟ್ಟಿದ್ದರೆ, ಅವರ ಮೇಲೆ ಕ್ರಮವನ್ನು ಜರುಗಿಸುತ್ತೇವೆ ಆದರೆ ಉಳಿಕೆ ಕೆಲಸಗಳನ್ನು ಮಾಡಿಸುವಂಥ ಕೆಲಸ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛಿಪಡುತ್ತೇನೆ

ಶ್ರೀ ಎನ್ ಯೋಗೀಶ್ ಭಟ್ ಮಧ್ಯಾಹ್ನದ ಊಟದ ವ್ಯವಸ್ಥೆ ಸರ್ಕಾರೀ ಆಸ್ಪತ್ರೆಗಳಲ್ಲಿ, ಪಿಹೆಚ್‌ಸಿ ಗಳಲ್ಲಿ ಇದೆ ಎಂದು ಹೇಳಿದ್ದಾರೆ ಆದರ ಬಗ್ಗೆ ಆದೇಶ ಕೊಟ್ಟರೂ ಕೂಡ ಇದುವರೆಗೂ ಅದು ಸರಿಯಾಗಿ ಜಾರಿಯಾಗಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಸರ್ಕಾರಿ ಆಸ್ಪತ್ರೆಗಳಲ್ಲಿ ಊಟವನ್ನಂತೂ ಕೊಡುತ್ತಿದ್ದೇವೆ ಇವರು ಹೇಳುವ ರೀತಿ ಏನಾದರೂ ಆಗಿದ್ದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಚನೆ ಕೊಡುತ್ತೇವೆ.

26 ವಿಷಯ ಕಮಲಾಪುರ ಕ್ಷೇತ್ರದಲ್ಲಿನ ಗ್ರಾಮಗಳಿಗೆ ರಸ್ತೆ ಸೌಕರ್ಯ ಮತ್ತು ಅವುಗಳ ನಿರ್ವಹಣೆ ಮಾಡುವ ಬಗ್ಗೆ

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) ಸನ್ಮಾನ್ಯ ಅಧ್ಯಕ್ಷರೇ, ಶೂನ್ಯವೇಳೆಯಲ್ಲಿ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು ನನ್ನ ಕ್ಷೇತ್ರವಾದ ಕಮಲಾಪುರ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದು, ಇಡೀ ಗುಲ್ಬರ್ಗಾ ಜಿಲ್ಲೆಯಲ್ಲೇ ಅತ್ಯಂತ ಹಿಂದುಳಿದ ಕ್ಷೇತ್ರ ನಾನು ಈ ಅಧಿವೇಶನ ಮುಗಿಸಿ ಕ್ಷೇತ್ರಕ್ಕೆ ಹೋಗಬೇಕಾದರೆ ಭಯಭೀತನಾಗಿ ಹೋಗಬೇಕಾಗಿದೆ ಇದು ಗುಲ್ಬರ್ಗಾ ಜಿಲ್ಲೆಯ ಎಲ್ಲಾ ಶಾಸಕರಿಗೂ ಅನ್ವಯವಾಗಬಹುದು ಅಲ್ಲಿ ಎಲ್ಲಾ ರೋಡುಗಳೂ ಹದಗೆಟ್ಟಿವೆ ಯಾವ ರೋಡುಗಳಲ್ಲೂ ಸಹ ವಾಹನಗಳು ಓಡಾಡಲು ಬಹಳ ತೊಂದರೆಯಿದೆ ಚುನಾವಣಾ ಸಂದರ್ಭದಲ್ಲಿ ನಾನು ಕಮಲಾಪುರ, ಜೀವಣಗಿ, ಗೋಗಿ, ಬೇಲೂರುಗಳಿಗೆ ಹೋಗಿಲ್ಲ ಏಕೆಂದರೆ, ಯಾರು ಮತ ಕೇಳಲು ಬರುತ್ತಾರೋ ಅವರನ್ನು ಎಲ್ಲರೂ ಸೇರಿ ಜಗತ್ತಿ